ಹಾಗೂ ಮನಸ್ಸನ್ನು ಅರಳಿಸುವುದು. ಶ್ರೇಷ್ಠ ಹಾಸ್ಯ ಕೃತಿಗಳನ್ನು ರಚಿಸಿಟ್ಟು ಹೋದ ಎಷ್ಟೋ ಮಹಾತ್ಮರು ಕನ್ನಡದಲ್ಲಿದ್ದಾರೆ. ಹಾಸ್ಯ ನಟರು, ಹಾಸ್ಯ ನಾಟಕಕಾರರು, ವ್ಯಂಗ್ಯಚಿತ್ರ ಕಲಾವಿದರು... ತಮ್ಮ ಅತ್ಯುತ್ತಮ ಅಭಿನಯದಿಂದ ಹಾಸ್ಯ ಸಂಭಾಷಣೆಗಳ ಮೂಲಕ, ವ್ಯಂಗ್ಯರೇಖೆಗಳ ಮೂಲಕ ಜನರನ್ನು ನಕ್ಕು ನಲಿಸಿ ಕೊನೆಯಲ್ಲೊಂದು ಉತ್ಕೃಷ್ಟವಾದ ಸಂದೇಶವನ್ನು ಇಟ್ಟೇ ಪ್ರದರ್ಶನವನ್ನು ಕೊನೆಗೊಳಿಸುತ್ತಿದ್ದರು. ಕೈಲಾಸಂ, ನಾ ಕಸ್ತೂರಿ, ಬೀಚಿ, ರಾ.ಶಿ, ದಾಶರಥಿ ದೀಕ್ಷಿತ್, ನಾಡಿಗೇರ ಕೃಷ್ಣರಾಯರು, ಪಾವೆಂ ಆಚಾರ್ಯರು, ವಿ. ಸೀತಾರಾಮಯ್ಯ, ಪಡುಕೋಣೆ, ರಮಾನಂದ ರಾಯರು, ಅರಾಸೆ, ಟಿ. ಸುನಂದಮ್ಮ ಕೇಫ... ಹೀಗೆ ಹಿರಿಯರದೊಂದು ತಲೆಮಾರು ಸಮೃದ್ಧ ಹಾಸ್ಯ ಸಾಹಿತ್ಯದ ಕಣಜವನ್ನೇ ಕಟ್ಟಿ ಗಟ್ಟಿ ಕಾಳುಗಳನ್ನು ತುಂಬಿಟ್ಟು ಹೋಗಿದ್ದಾರೆ. ರಾಶಿಯವರು ಪ್ರಾರಂಭಿಸಿದ 'ಕೊರವಂಜಿ' ಪತ್ರಿಕೆ ಅನೇಕ ವರ್ಷಗಳ ಕಾಲ ಕನ್ನಡಿಗರನ್ನು ನಗಿಸಿತು. ಕೊರವಂಜಿಯ ಮಗಳು ಅಪರಂಜಿ ಹಾಸ್ಯ ಪತ್ರಿಕೆಯಾಗಿ ಉತ್ಕೃಷ್ಟ ಬರಹಗಳನ್ನು ಪ್ರಕಟಿಸುತ್ತಾ ಬಂದಿದೆ.



ಪ್ರತಿ ವರ್ಷ ಮೇಲೆ ಹೇಳಿದ ಎಲ್ಲಾ ಹಾಸ್ಯ ದಿಗ್ಗಜಗಳ ನೆನಪಿನಲ್ಲಿ ಹಾಸ್ಯೋತ್ಸವವನ್ನು ನಡೆಸಿ ದೇಶ ವಿದೇಶಗಳಿಂದ ಅಭಿಮಾನಿಗಳು ಬಂದು ಕೂತು ನಕ್ಕು ಹಗುರಾಗಿ ಹೋಗುವ ಕಾರ್ಯಕ್ರಮಗಳನ್ನು ದಶಕಗಳ ಕಾಲ ನಡೆಸಿತ್ತು. ಈ ಹಾಸ್ಯೋತ್ಸವಗಳ ನಿರ್ದೇಶನದ ಹೊಣೆ ಹೊತ್ತು ಇಡೀ ದಿನದ ಕಾರ್ಯಕ್ರಮಗಳಿಗೆ ಒಂದು ಸಾಹಿತ್ಯಿಕ ಟಚ್ ಕೊಡುವ, ಘನತೆಯನ್ನು ಸ್ಥಾಪಿಸುವ ಕೆಲಸ ಮಾಡಿದವರು ವಿದ್ವಾಂಸರೂ, ಕನ್ನಡ ಪ್ರಾಧ್ಯಾಪಕರೂ, ಹಾಸ್ಯ ಸಾಹಿತ್ಯದ ಅಧಿಕೃತ ಮುಂಚೂಣಿಯಲ್ಲಿರುವವರೂ ಆದ ಸನ್ಮಾನ್ಯ ಅ. ರಾ. ಮಿತ್ರ ಅವರು. ಮಿತ್ರ ಅವರು ಮಾತಾಡಲು ನಿಂತರೆ ಕುಮಾರವ್ಯಾಸ ಕಾಳಿದಾಸ ಪಂಪ ರನ್ನ ಇತ್ಯಾದಿ ಕನ್ನಡದ ಗಣಿಗಳಿಂದ ಆಯ್ದು ಹಾಸ್ಯದ ಮಾತುಗಳಲ್ಲಿ ಪೋಣಿಸಿ ಪ್ರೇಕ್ಷಕರನ್ನು ತಲೆದೂಗುವಂತೆ ಮಾತನಾಡುತ್ತಿದ್ದ ವಾಗ್ಮಿಗಳು. ಮಿತ್ರ ಅವರ ಗರಡಿಯಲ್ಲಿ ತಯಾರಾದ ಹಾಸ್ಯ ಲೇಖಕರ ದೊಡ್ಡ ಪಟ್ಟಿಯೇ ಇದೆ. ಅವರೆಲ್ಲರೂ ಉತ್ತಮ ಹಾಸ್ಯ ಭಾಷಣಕಾರರು ಸಹ ಆಗಿದ್ದಾರೆ. ಅಪರಂಜಿ ಶಿವು, ಶ್ರೀನಿವಾಸ ವೈದ್ಯ, ವೈ.ವಿ. ಗುಂಡೂರಾವ್, ಬೇಲೂರು ರಾಮಮೂರ್ತಿ, ಅಣಕು ರಾಮನಾಥ್, ಕೃಷ್ಣ ಸುಬ್ಬರಾವ್, ನುಗ್ಗೇಹಳ್ಳಿ ಪಂಕಜಾ, ಲೀಲಾ ಮಿರ್ಲೆ ಇವರೆಲ್ಲರ ಜತೆ ನಾನು ಸಹ ತ್ರಿಕರಣಪೂರ್ವಕವಾಗಿ ಹಾಸ್ಯೋತ್ಸವದಲ್ಲಿ ಪಾಲ್ಗೊಂಡಿದ್ದೇನೆ. ನಕ್ಕು ನಕ್ಕು ಹೊಟ್ಟೆ ಹುಣ್ಣು ಮಾಡಿಕೊಂಡು ಮುಂದಿನ ವರ್ಷದ ಹಾಸ್ಯೋತ್ಸವಕ್ಕೆ ಈಗಲೇ ಜಾಗ ಬುಕ್ ಮಾಡಿಡುವ ಪ್ರೇಕ್ಷಕರನ್ನು ನೋಡಿದ್ದೇನೆ. ಅಪರಂಜಿ ಬಳಗದ ಕಾರ್ಯದರ್ಶಿಯಾಗಿ ಸ್ವತಃ ಬೀಚಿಯವರ ಮೊಮ್ಮಗನೇ ಆದ ಉಲ್ಲಾಸ ಅವರು ಉತ್ಸಾಹದಿಂದ ಕಾರ್ಯಕ್ರಮವನ್ನು ಸಂಘಟಿಸುವ ಹೊಣೆ ಹೊತ್ತಿದ್ದಾರೆ. ಪ್ರತಿವರ್ಷ ಡಿಸೆಂಬರ್ 25ರಂದು ದೊಡ್ಡ ಪ್ರಮಾಣದಲ್ಲಿ ನಡೆಯುತ್ತಿದ್ದ ಹಾಸ್ಯೋತ್ಸವ ಈಗ ಸಂಕ್ಷಿಪ್ತ ರೂಪ ಪಡೆದು ಏಪ್ರಿಲ್ ಮೊದಲ ವಾರದಲ್ಲಿ 'ಅಪರಂಜಿ ಹಬ್' ಎಂಬ ಕಾರ್ಯಕ್ರಮವಾಗಿ ಆಚರಿಸಲ್ಪಡುತ್ತಿದೆ. ಮತ್ತದೇ ಹಿರಿಕಿರಿಯ ಹಾಸ್ಯ ಸಾಹಿತಿಗಳ ಸಮಾಗಮ. ವೇದಿಕೆಯಲ್ಲಿ ಚಟಪಟನೆ ಸಿಡಿಯುವ ನಗೆ ಚಟಾಕಿಗಳು ಅಣಕವಾಡುಗಳು, ನಾಟಕದ ತುಣುಕುಗಳು, ವೈವಿಧ್ಯಮಯ ಹಾಸ್ಯದ ರಸದೌತಣ. ನೋಡುವವರು ಕೇಳುವವರು ನಕ್ಕು ನಕ್ಕು ಕಣ್ಣಲ್ಲಿ ನೀರು ಬರುವಷ್ಟು ಕಚಗುಳಿ.

ಈ ಬಗೆಯ ಹಾಸ್ಯ ಗೋಷ್ಠಿಗಳು ಕನ್ನಡದಲ್ಲಿ ಸಾಧ್ಯವಿರುವಾಗ ನಮ್ಮ ಟೀವಿ ಕಾಮಿಡಿ ಷೋಗಳು ಅಂತಹ ಅಪೂರ್ವ ಭಂಡಾರದಿಂದ ವಸ್ತುಗಳನ್ನೇಕೆ ಎತ್ತಿಕೊಳ್ಳಬಾರದು? ಅಶ್ಲೀಲತೆಗೆ ಬಟ್ಟೆತೊಡಿಸಿ, ಅಸಭ್ಯತೆಗೆ ಫಿನಾಯ್ಲ್ ಸುರಿದು, ಅಸಹ್ಯಕ್ಕೆ ಡಯೋಡರಂಟ್ ಹಾಕಿ, ಸ್ವಚ್ಛ ಹಾಸ್ಯ ಅಭಿಯಾನ ಪ್ರಾರಂಭವಾಗಲಿ ಎಂದು ಹಾಸ್ಯ ಸಾಹಿತಿಗಳ ಹಾಗೂ ಹಾಸ್ಯಾಸಕ್ತರೆಲ್ಲರ ಪರವಾಗಿ ಹಾರೈಸುತ್ತೇನೆ. ಸ್ವಚ್ಛಗೊಳಿಸುವ ಮಹಾನುಭಾವರು ಮುಂದೆ ಬಂದು ಸ್ವಚ್ಛ ನಗುವಿನ ತಿಳಿಗೊಳಗಳನ್ನು ನಿರ್ಮಿಸುವ ದಿನಗಳಿಗಾಗಿ 'ಕಾಯುವುದೇ ಕೈಲಾಸ' ವೆಂದುಕೊಂಡಿದ್ದೇನೆ. ●